145 ಶೀ ರಹೀಮ ಇಲ್ಯಾನ
ನಿ-72
ಕ್ರ-160 ಕಂಪ್ಯೂಟರ್ ಶಾಖೆ.

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಸೀರ್ ಅಹ್ಮದ್ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

ಪ್ರಶ್ನೆ:

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ) ಗುತ್ತಿಗೆ ಆಧಾರದ ಮೇಲೆ ಸಮಾಲೋಚಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ. ಕೆ.ಬಿ ವಾಗ್ಮೋಡೆ ಇವರು ದಿನಾಂಕ:17-12-2021 ರಂದು ಬೆಳಗ್ಗೆ ಕರ್ತವ್ಯದಲ್ಲಿರುವ ಸಮಯದಲ್ಲಿ ವಿಧಾನಸೌಧದ ಆವರಣದಲ್ಲಿರುವ ಕೆಂಗಲ್ ಹನುಮಂತಯ್ಯ ಪ್ರತಿಮೆ ಮುಂಭಾಗ ತೀವ್ರ ಹೃದಯಾಘಾತದಿಂದ ಧಿಡರನೇ ಕುಸಿದು ಬಿದ್ದಿರುತ್ತಾರೆ ತಕ್ಷಣ ಇವರಿಗೆ ವಿಕ್ರಂ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಿದರು ಸಹ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 19-12-2021 ರಂದು ಮರಣ ಹೊಂದಿರುತ್ತಾರೆ. ಸದರಿಯವರು ಕಳೆದ 14 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಸಂಭಾವನೆ ರೂಪದಲ್ಲಿ ವೇತನ ಪಡೆದಿರುತ್ತಾರೆ ಹಾಗೂ ಕಳೆದ 2 ತಿಂಗಳುಗಳಿಂದ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಕನಿಷ್ಠ 6 ತಿಂಗಳಾಗದೇ ಪ್ರಾವಿಡೆಂಟ್ ಫಂಡ್ ಕೂಡ ಲಭ್ಯವಾಗುವುದಿಲ್ಲ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಇವರಿಗೆ ಯಾವುದೇ ಸೇವಾ ಭದ್ರತೆ ಹಾಗೂ ಇತರೆ ಸೌಲಭ್ಯಗಳು ಇರುವುದಿಲ್ಲ ಆದುದರಿಂದ ಆರ್ಥಿಕ ಸಂಕಷ್ಟದಿಂದ ಬಳಲುತ್ತಿರುವ ಇವರ ಕುಟುಂಬದವರಿಗೆ ಕನಿಷ್ಠ 10 ಲಕ್ಷ ರೂಪಾಯಿಗಳ ವಿಮೆ ಮೊತ್ತವನ್ನು ಸರ್ಕಾರವು ಪಾವತಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರ ಗಮನ ಸೆಳೆಯ ಬಯಸುತ್ತೇವೆ.

ಉತ್ತರ:

ದಿವಂಗತ ಕೆ.ಬಿ ವಾಗ್ಮೋಡೆ ಇವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ) ಹಾಗೂ ಇ-ಆಡಳಿತ ಕೇಂದ್ರದಲ್ಲಿ ಸಮಾಲೋಚಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ನಂತರ ದಿನಾಂಕ:25-07-2021ರಿಂದ ಇವರು ಮೆ|| ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯಿಂದ ಹೊರ ಗುತ್ತಿಗೆ ಆಧಾರದಲ್ಲಿ ಇ-ಆಫೀಸ್ ಯೋಜನೆಯಲ್ಲಿ ಹಿರಿಯ ಸಮಾಲೋಚಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಸಂಭಾವನೆಯ ಸಲುವಾಗಿ ಮಾಸಿಕ ರೂ.47371/-(ನಲವತ್ತೇಳು ಸಾವಿರದ ಮುನ್ನೂರ ಎಪ್ಪತ್ತೊಂದು ರೂಪಾಯಿಗಳು ಮಾತ್ರ) ಹೊರಗುತ್ತಿಗೆ ಸಂಸ್ಥೆಗೆ ಪಾವತಿಸಲಾಗಿದೆ. ಇದರಲ್ಲಿ ಮಾಸಿಕ ಪಿಎಫ್ ಮೊತ್ತ ರೂ.3750/-(ಸಿಬ್ಬಂದಿ ಪಾವತಿ ರೂ.1800/- ಇ-ಆಡಳಿತ ಕೇಂದ್ರದ ಪಾವತಿ ರೂ.1950 /-) ಸೇರಿರುತ್ತದೆ.

ಸರ್ಕಾರದಲ್ಲಿ ಹೊರ ಗುತ್ತಿಗೆ ಮಾನವ ಸಂಪನ್ಮೂಲಗಳು ಮೃತಪಟ್ಟಲ್ಲಿ ಪರಿಹಾರ ನೀಡುವ ಯಾವುದೇ ಸೌಲಭ್ಯ / ಯೋಜನೆ ಇರುವುದಿಲ್ಲ.

ಕಡತ ಸಂಖ್ಯೆ:ಸಿಆಸುಇ 117 ಪಿಆರ್ ಜೆ 2021

(ಬಸವರಾಜ ಬೊಮ್ಮಾಯಿ)
ಮುಖ್ಯ ಮಂತ್ರಿ